ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 2524
ಸದಸ್ಯರ ಹೆಸರು	: ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	: 23.03.2022
ಉತ್ತರಿಸುವ ಸಚಿವರು	: ಕಂದಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ನರಸಾಪುರ ಗ್ರಾಮದ ಸರ್ವೇ ನಂ.56 ರಲ್ಲಿ ಜಿ.ಟಿ.ಬಿ ಕ್ರಷರ್ಸ್ ಇವರಿಗೆ ಸರ್ಕಾರದಿಂದ ಮಂಜೂರಾದ ಜಮೀನಿನ ವಿಸ್ತೀರ್ಣವೆಷ್ಟು;	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ನರಸಾಪುರ ಗ್ರಾಮದ ಸ.ನಂ.01 ರಲ್ಲಿ 1-00 ಎಕರೆ (ಸ.ನಂ.01 ದುರಸ್ತಿಯಾಗಿ ಹೊಸ ಸ.ನಂ.56 ಆಗಿರುತ್ತದೆ.) ಸರ್ಕಾರಿ ಜಮೀನು ಶ್ರೀ ಪಾತೂರು ವೆಂಕಟರವಣಪ್ಪ ಎಂಬುವರಿಗೆ ತಹಸೀಲ್ದಾರ್ ರವರ ಕ್ರಮಾಂಕ: ಆರ್.ಯು.ಸಿ.ಎಲ್.ಎನ್.ಡಿ/14/1977-7 ದಿನಾಂಕ: 15/10/1977 ರಂದು ಅಧಿಕೃತ ಜ್ಞಾಪನ ಹೊರಡಿಸಿ, ದಿನಾಂಕ:21/10/1978 ರಂದು ಕೆಲವೊಂದು ಷರತ್ತುಗಳನ್ನು ವಿಧಿಸಿ ಸಾಗುವಳಿ ಚೀಟಿಯನ್ನು ನೀಡಲಾಗಿರುತ್ತದೆ. ಪ್ರಸ್ತಾಪಿತ ಸ.ನಂ.01 ದುರಸ್ತಿಯಾಗಿ ಹೊಸ ಸ.ನಂ.56 ಎಂ.ಆರ್.219-5/1990-91ರಂತೆ ಖಾತೆ ಆಗಿರುತ್ತದೆ. ಸದರಿ ಮೂಲ ಮಂಜೂರಿದಾರರ ಪೌತಿ ನಂತರ ಅವರ ಹೆಂಡತಿಯಾದ ಶ್ರೀಮತಿ ಗಂಗಮ್ಮ ಕೋಂ ಲೇಟ್ ಪಾತೂರು ವೆಂಕಟರವಣಪ್ಪ ರವರಿಗೆ ಎಂ.ಆರ್.08/2006-07 ದಿನಾಂಕ:19/02/2007 ರಂದು ಖಾತೆಯಾಗಿ ತದನಂತರ ಸದರಿ ಜಮೀನನ್ನು ಶ್ರೀ ಜಿ.ವಿ ಕೃಷ್ಣಪ್ಪ ರವರಿಗೆ ಕ್ರಯವಾಗಿ ಎಂ.ಆರ್.12/2006-07 ರಂತೆ ಕ್ರಯದಂತೆ ಖಾತೆ ದಾಖಲಾಗಿರುತ್ತದೆ. ಸದರಿ ಜಮೀನನ್ನು ಶ್ರೀ ಜಿ.ವಿ ಕೃಷ್ಣಪ್ಪ ರವರಿಗೆ ಜಿಲ್ಲಾಧಿಕಾರಿ ಕಚೇರಿ ಅಧಿಕೃತ ಜ್ಞಾಪನ ಸಂಖ್ಯೆ: ಎ.ಎಲ್.ಎನ್/ಎಸ್.ಆರ್/59/2007-08 ದಿನಾಂಕ: 16/08/2008 ರಂದು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿ, ಕೋಟಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನರಸಾಪುರ ಗ್ರಾಮಕ್ಕೆ ಸೇರಿದ ಪಂಚಾಯಿತಿ ಖಾತೆ ಸಂಖ್ಯೆ:83/89 ಎಂದು ಖಾತೆ ದಾಖಲಾಗಿರುತ್ತದೆ. ಸದರಿ ಜಮೀನನ್ನು ಶ್ರೀಮತಿ ಹೆಚ್.ಕೆ.ಸಾವಿತ್ರಿ ಕೋಂ ಹೆಚ್.ಟಿ.ತ್ಯಾಗರಾಜ್ ರವರಿಗೆ ದಸ್ತಾವೇಜು ಸಂಖ್ಯೆ:1525/2011-12 ದಿನಾಂಕ:04/08/2011 ರಂದು ಕ್ರಯವಾಗಿರುತ್ತದೆ. ತದನಂತರ ಶ್ರೀಮತಿ ಹೆಚ್.ಕೆ.ಸಾವಿತ್ರಿ ಕೋಂ ಹೆಚ್.ಟಿ. ತ್ಯಾಗರಾಜ್‌ರವರ ಮಾಲೀಕತ್ವದ ಮೆ॥ಜಿ.ಟಿ.ಬಿ.ಸ್ಟೋನ್ ಕ್ರಷರ್ ರವರ ವತಿಯಿಂದ ಸದರಿ ಜಮೀನಿಗೆ ಸಂಬಂಧಿಸಿದ ಇಲಾಖೆಗಳಾದ

		ಕಂದಾಯ, ಅರಣ್ಯ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಅಧಿಕಾರಿಗಳು ಜಂಟಿಯಾಗಿ ಬೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿ, ಕರ್ನಾಟಕ ಕಲ್ಲುಪುಡಿ ಘಟಕಗಳ ಅಧಿನಿಯಮ 2011 ರ ನಿಯಮ 6(3)ರ ಎಲ್ಲಾ ಷರತ್ತುಗಳು ಪಾಲನೆಯಾಗುತ್ತಿರುವುದರಿಂದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಹಾಗೂ ನಿಯಂತ್ರಣ ಪ್ರಾಧಿಕಾರದಿಂದ ದಿನಾಂಕ:01/07/2017 ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ನಿಯಮಾನುಸಾರ ನಮೂನೆ-ಸಿಯನ್ನು ಪಡೆದುಕೊಂಡಿರುತ್ತಾರೆ.
ಆ)	ಸದರಿಯವರು ಸರ್ಕಾರ ಮಂಜೂರು ಮಾಡಿದ್ದಕ್ಕಿಂತ ಹೆಚ್ಚಿಗೆ ಸ್ಥಳೀಯ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಜಮೀನನ್ನು ಒತ್ತುವರಿ ಮಾಡಿಕೊಂಡು ಭೂ ಪರಿವರ್ತನೆ ಮಾಡಿಸಿಕೊಳ್ಳದೆ ವಾಣಿಜ್ಯ ಚಟುವಟಿಕೆಯಲ್ಲಿ ತೊಡಗಿಕೊಂಡು ಕಾನೂನು ಬಾಹಿರವಾಗಿ ಅನಧಿಕೃತವಾಗಿ ಶೆಡ್ ಹಾಗೂ ಬೇಲಿಯನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ಇವರ ದಿನಾಂಕ:18/03/2022 ರಂದು ಸ್ಥಳ ತನಿಖೆ ಮಾಡಿ ನರಸಾಪುರ ಗ್ರಾಮದ ಸ.ನಂ.56 ರಲ್ಲಿ 1-00 ಎಕರೆ ಪ್ರದೇಶದಲ್ಲಿ ಕ್ರಷರ್ ಘಟಕ ಸ್ಥಾಪನೆ ಮಾಡಿರುವುದಾಗಿ, ಸದರಿ ಪ್ರದೇಶದ ಉತ್ತರಕ್ಕೆ ಸ.ನಂ.01ರ ಪೈಕಿ 1-00 ಎಕರೆ ಪ್ರದೇಶ ಶ್ರೀ ದಸ್ತಗಿರಿ ಸಾಬ್ (ಹಾಲಿ ಪಹಣಿ ಮಲ್ಲಿಕಾಬಿ) ರವರಿಂದ ಮತ್ತು ಪಶ್ಚಿಮಕ್ಕೆ 2-23 ಎಕರೆ/ಗುಂಟೆ ಜಮೀನು ಶ್ರೀ ಎಚ್.ಇಸ್ಮಾಯಿಲ್ ರವರುಗಳಿಂದ ಸ.ನಂ.56ರ ಮಾಲೀಕರಾದ ಹೆಚ್.ಕೆ.ಸಾವಿತ್ರಿ ಮತ್ತು ಅವರ ಗಂಡ ತ್ಯಾಗರಾಜ್ ರವರು ಜಿ.ಪಿ.ಎ ಪಡೆದಿರುತ್ತಾರೆ. ಪೂರ್ವಕ್ಕೆ ಸದರಿಯವರ ಕುಟುಂಬಸ್ಥರಾದ ಶ್ರೀಮತಿ ಎಚ್.ಟಿ. ರೂಪಶ್ರೀ ರವರ ಹೆಸರಿನಲ್ಲಿ ಸ.ನಂ.55ರ 1-20 ಎಕರೆ/ಗುಂಟೆ ಜಮೀನಿರುತ್ತದೆ. ಸ.ನಂ.56ರಲ್ಲಿ 1-00 ಎಕರೆ, ಸ.ನಂ.55ರಲ್ಲಿ 1-20 ಎಕರೆ/ಗುಂಟೆ ಮತ್ತು ಸ.ನಂ.1ರ ಪೈಕಿ 1-00 ಎಕರೆ ಒಟ್ಟು 3-20 ಎಕರೆ/ಗುಂಟೆ ಜಮೀನಿನ ಸುತ್ತಲೂ ಕಾಂಪೌಂಡ್ ನಿರ್ಮಿಸಿರುತ್ತಾರೆ. ಮುಂದುವರೆದು, ಸ.ನಂ.55ರಲ್ಲಿ 1-20 ಎಕರೆ/ಗುಂಟೆ ಪ್ರದೇಶದಲ್ಲಿನ ಪೈಕಿ 23*75 ಅಡಿಗಳ ವಿಸ್ತೀರ್ಣದಲ್ಲಿ ವಾಸದ ಉದ್ದೇಶಕ್ಕಾಗಿ ಶೆಡ್ ನಿರ್ಮಿಸಿರುತ್ತಾರೆ. ಆದರೆ, ಸದರಿ ಸರ್ವೆ ನಂಬರ್ ಭೂಪರಿವರ್ತನೆ ಆಗದೆ ಇರುವುದರಿಂದ. ಸದರಿ ಮಾಲೀಕರಾದ ಶ್ರೀಮತಿ ಎಚ್.ಟಿ. ರೂಪಶ್ರೀ ಬಿನ್ ಹೆಚ್.ಜಿ.ತ್ಯಾಗ್‌ರಾಜ್ ರವರಿಗೆ ದಿನಾಂಕ:18.03.2022 ರಂದು ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರು ನೋಟೀಸ್ ನೀಡಿರುತ್ತಾರೆ.
ಇ)	ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ;	ನರಸಾಪುರ ಗ್ರಾಮದ ಸ.ನಂ.55 ರಲ್ಲಿ 1-20 ಎಕರೆ/ಗುಂಟೆ ಜಮೀನಿನ ಹಿಡುವಳಿ ಪ್ರದೇಶದಲ್ಲಿ 23*75 ಅಡಿಗಳ ವಿಸ್ತೀರ್ಣದಲ್ಲಿ ವಾಸದ ಉದ್ದೇಶಕ್ಕಾಗಿ ಶೇಡ್ ನಿರ್ಮಿಸಲಾಗಿರುತ್ತದೆ. ಹಾಗೂ ಸರ್ಕಾರಿ ಜಮೀನು ಯಾವುದೇ ಒತ್ತುವರಿ ಇರುವುದಿಲ್ಲ.

ಈ)	ಈ ಸಂಬಂಧ ಕಂದಾಯ ಅಧಿಕಾರಿಗಳು ಪದೇ ಪದೇ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ ವಿಷಯದ ಬಗ್ಗೆ ಗ್ರಾಮಲೆಕ್ಕಿಗರು, ರಾಜಸ್ವ ನಿರೀಕ್ಷಕರು ಮತ್ತು ಭೂ ಮಾಪಕರೊಂದಿಗೆ ತಹಶೀಲ್ದಾರ್ ರವರು ಜಂಟಿ ಸ್ಥಳ ತನಿಖೆ ಮಾಡಿ ಸ.ನಂ.55 ರಲ್ಲಿ 1-20 ಎಕರೆ/ಗುಂಟೆ ಜಮೀನಿನ ಹಿಡುವಳಿ ಪ್ರದೇಶದ ಪೈಕಿ 23*75 ಅಡಿಗಳ ವಿಸ್ತೀರ್ಣದಲ್ಲಿ ವಾಸದ ಉದ್ದೇಶಕ್ಕಾಗಿ ಶೆಡ್ ನಿರ್ಮಿಸುತ್ತಿದ್ದು ಈ ಬಗ್ಗೆ ಸದರಿ ಮಾಲೀಕರಿಗೆ ನೋಟೀಸ್ ನೀಡಲಾಗಿರುತ್ತದೆ.
ಉ)	ಈ ಸಂಬಂಧ ತಪ್ಪಿತಸ್ಥ ಅಧಿಕಾರಿ/ನೌಕರರ ಹಾಗೂ ಕ್ರಷರ್ ಮಾಲೀಕರ ವಿರುದ್ಧ ತೆಗೆದುಕೊಂಡ ಕಾನೂನು ಕ್ರಮಗಳೇನು?	ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ನರಸಾಪುರ ಗ್ರಾಮ ಸ.ನಂ.55 ರಲ್ಲಿ 1-20 ಎಕರೆ/ಗುಂಟೆ ಶ್ರೀಮತಿ ಹೆಚ್.ಟಿ. ರೂಪಶ್ರೀ ಬಿನ್ ತ್ಯಾಗರಾಜ್ ರವರ ಹಿಡುವಳಿ ಜಮೀನಿನ ಪೈಕಿ 23*75 ಅಡಿಗಳ ವಿಸ್ತೀರ್ಣದಲ್ಲಿ ಅನಧಿಕೃತವಾಗಿ ಶೆಡ್ಡಗಳನ್ನು ನಿರ್ಮಾಣ ಮಾಡುತ್ತಿರುವ ಪ್ರಯುಕ್ತ ಈಗಾಗಲೇ ತಹಸೀಲ್ದಾರ್ ಚಿಂತಾಮಣಿ ತಾಲ್ಲೂಕು ರವರು ನೋಟೀಸ್ ನೀಡಿರುತ್ತಾರೆ. ನಂತರ ಸದರಿ ಜಮೀನನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 96 ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 107ಎ ಮತ್ತು 107-ಎಎ ರಡಿಯಲ್ಲಿ ನಿಯಮಾನುಸಾರ ಕ್ರಮವಹಿಸಲಾಗುತ್ತದೆ.

ಸಂಖ್ಯೆ : ಆರ್‌ಡಿ 140 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು